ಬ್ರಹ್ಮಸ್ತುತಿ

ಏನು ಬರೆದೆಯೊ ಬ್ರಹ್ಮ (ದೇವರ ನಾಮ) **ರಾಗ:ಬಾಗೇಶ್ರೀ, ಆದಿತಾಳ**

ಏನು ಬರೆದೆಯೊ ಬ್ರಹ್ಮ ನೀನೆಷ್ಟು ನಿರ್ದಯನೊ। ಅಭಿಮಾನವನು ತೊರೆದು ಪರರನ್ನು ಬೇಡುವುದ॥ಪ॥ ಗೇಣೊಡಲು ಪೊರೆವುದಕೆ ಪೋಗಿ ಪರರನು। ಪಂಚ ಬಾಣಸಮ ರೂಪ ನೀನೆಂದು ಪೊಗಳೆ॥ ಆಣೆ ನಿನ್ನಾಣೆಲ್ಲ ನಾಳೆ ಬಾರೆಂದೆನಲು। ಗಾಣ ತಿರುಗುವ ಎತ್ತಿನಂತೆ ಬಳಲುವುದ॥1॥ ಬಲ್ಲಿದರ ಮನೆಯ ಬಾಗಿಲ ಕಾಯ್ದು ಬೇಸತ್ತು। ಸೊಲ್ಲು ಸೊಲ್ಲಿಗೆ ಅವರ ಕೊಂಡಾಡುತ। ಇಲ್ಲ ಈ ವೇಳೆಯಲಿ ತಿರುಗಿ ಬಾರೆಂದೆನಲು। ಅಲ್ಲವನು ತಿಂದ ಇಲಿಯಂತೆ ಕೊರಗುವುದ॥2॥ ಹಿಂದೆ ಬರೆದ ಬರಹ ಹೇಗಾದರಾಗಲಿ। ಮುಂದೆನ್ನ ವಂಶದಲಿ ಜನಿಸುವರ ಕಾಯೊ। ಸಂದೇಹಿಸಲಿಬೇಡ ಪುರಂದರವಿಠ್ಠಲ। ಕಂದರ್ಪ ಜನಕ ಉಡುಪಿಯ ಕೃಷ್ಣನಾಣೆ॥3॥

ಬ್ರಹ್ಮ ನಿಂಗೆ ಜೋಡಿಸ್ತೀನಿ (ರತ್ನನಪದ) **ರಾಗ: ಜಾನಪದ ಮಟ್ಟು**

ಬ್ರಹ್ಮನಿಂಗೆ ಜೋಡಿಸ್ತೀನಿ ಯೆಂಡ ಮುಟ್ಟಿದ ಕೈನ। ಭೂಮಿ ಉದ್ಕು ಬೊಗ್ಗಿಸ್‌ತೀನಿ ಯೆಂಡತುಂಬ್ಕೊಂಡ್ ಮೈನ॥ ಬುರ್ ಬುರ್ ನೊರೆ ಬಸಿಯೋವಂತ ಒಳ್ಳೆ ವುಳಿ ಎಂಡ। ಕೊಡ್ತಿನ್ ನಂದು ಪ್ರಾರ್ತ್ನೇಕೇಳು ಸರಸೋತಮ್ಮನ್ ಗಂಡ॥ ಸರಸೋತಮ್ಮ ಮುನ್ಸ್ಕಂಡ್ ಅವ್ಳೆ ನೀನಾರ್ ಒಸ್ಸಿ ಯೋಳು। ಕುಡುದ್ಬುಟ್ ಆಡ್ದ್ರೆ ತೊದಲ್ತಾದಣ್ಣ ನಾಲ್ಗೆ ಬಾಳ ಗೋಳು॥ ಅಕ್ರಾನೆಲ್ಲಾ ಸರಸೋತಮ್ಮ ಪಟ್ಟಾಗ್ ಇಡಕೊಂಬುಟ್ಟಿ। ಮುನಿಯ ಯೆಂಡ ಬುಡೋವಂಗೇನೆ ಬುಡತಾಳ್ ಔಳ್ ಕೈಗಟ್ಟಿ॥ ಮುನಿಯಂಗಾರ ಕಾಸ್ ಓಗ್ತೈತೆ ಯೆಚ್ಗೆ ಯೆಂಡ ಬುಟ್ರೇ ಸರಸೋತಮ್ಮಂಗ್ ಏನೋಗ್ತೈತೆ ಮಾತ್‌ಸಲೀಸಾಗ್ ಕೊಟ್ರೆ॥ ನಂಗೆ ನೀನು ಲಾಯ್ರಿಯಾಗಿ ನನ್ ಕೇಸ್ ಗೆದ್ ಗಿದ್ ಕೊಟ್ರೆ। ಮಾಡ್ತೀನಣ್ಣ ನಿನ್ ವೊಟ್ಟೇನ ವುಳೀ ಎಂಡಕ್ ಪೊಟ್ರೆ॥ ಕಮಲದ್ ಊವಿನ್ ಕುರ್ಚಿ ಮ್ಯಾಗೆ ಜೋಕಾಗ್ ಕುಂತ್ಕೊ ನೀನು। ನಾಕೂ ಬಾಯ್ಲೂ ನಾಕು ಬುಂಡೆ ಯೆಂಡ ತತ್ತೀನ್ ನಾನು॥ ಸರಸೋತಮ್ಮಂಗ್ ಯೋಳಾಕಿಲ್ಲ ನೀನೇನ್ ಎದರ್ಕೋಬೇಡ। ಕೇಳಿದ್ ವರಾನ್ ವೊಂದೀಸ್ಕೊಟ್ರೆ ತಕ್ಕೋ ಯೆಂಡದ್ ಫೇಡ॥

ಪಾದಸ್ಮರಣೆಸ್ತುತಿ

ದೇವರನಾಮ

ಇಕೋ ನೋಡೆ ರಂಗನಾಥನ **ರಾಗ: ಶಂಕರಾಭರಣ**

ಇಕೋ ನೋಡೆ ರಂಗನಾಥನ ಪುಟ್ಟ ಪಾದವಾ। ಸಿಕ್ಕಿತೆ ಶ್ರೀ ಲಕ್ಷ್ಮೀಪತಿಯ ದಿವ್ಯ ಪಾದವಾ॥ಪ॥ ಶಂಖುಚಕ್ರ ಗದಾ ಪದ್ಮ ಅಂಕಿತ ಪಾದವಾ। ಅಂಕುಶ ಕುಲಿಶ ಧ್ವಜಾರೇಖಾ ಅಂಕಿತ ಪಾದವಾ। ಪಂಕಜಾಸನನ ಹೃದಯದಲ್ಲಿ ನಲಿವ ಪಾದವಾ। ಸಂಕಟ ಹರಣ ವೆಂಕಟೇಶನ ದಿವ್ಯಪಾದವಾ॥1॥ ಲಲನೆ ಲಕ್ಷ್ಮೀ ಅಂಕದಲ್ಲಿ ನಲಿವ ಪಾದವಾ। ಜಲಜಾಸನನಭೀಷ್ಟವೆಲ್ಲ ಪಡೆದ ಪಾದವಾ। ಮಲ್ಲರ ಗೆಲಿದು ಕಂಸಾಸುರನ ಕೊಂದ ಪಾದವಾ। ಬಲಿಯ ಮೆಟ್ಟಿದ ಭಾಗೀರಥಿಯ ಪಡೆದ ಪಾದವಾ॥2॥ ಬಂಡೆಯ ಬಾಲೆಯ ಮಾಡಿದ ಉದ್ದಂಡ ಪಾದವಾ। ಬಂಡಿಲಿದ್ದ ಶಕಟಾಸುರನ ಒದ್ದ ಪಾದವಾ। ಅಂಡಜ ಹನುಮರ ಭುಜದೊಳೊಪ್ಪುವ ದಿವ್ಯ ಪಾದವಾ। ಕಂಡೆವೆ ರಂಗ ವಿಠಲನ ದಿವ್ಯ ಪಾದವಾ॥3॥

ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ **ರಾಗ: ಪೂರ್ವಿಕಲ್ಯಾಣಿ, ಆದಿತಾಳ**

ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ ಫುಲ್ಲನಾಭ ನೀನಿದ್ದಲ್ಲಿ ಸೇರಿಸೆನ್ನ॥ಪ॥ ಮರಣವನೊಲ್ಲೆ ಜನನವನೊಲ್ಲೆ ದುರಿತ